# ಏನಾದರು ಒಂದಾಗಲಿ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 68.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 130.
3. **Note:** Lyrics given here are as per Ref. 1. Lyrics in Ref. 2 are slightly different and are mentioned in green highlights. The lyrics in Ref. 1 seem to be more correct.
4. **Note:** This song is not available in the book of Prof. S.K. Ramachandra Rao.

ರಾಗ: ಪಂತುವರಾಳಿ ತಾಳ: ಅಟ

ಏನಾದರೂ ಒಂದಾಗಲಿ, ನಮ್ಮ
ಮನೆತುಂಬ ದೇವರು ಮರತುಂಡು ಕಲ್ಲು ॥ ಪ ॥

ಅತ್ತೆಯ ಕಣ್ಣೊಂದು ಹರಿಯಲಿ
ಮತ್ತೆ ಮಾವನ ಕಾಲು ಮುರಿಯಲಿ
ಹಿತ್ತಲ ಗೋಡೆಯು ಬಿರಿಯಲಿ, ಕಾ-
ಳ್ಗತ್ತಲೆಯಾದರು ಕವಿಯಲಿ ಹರಿಯೆ ॥ ೧ ॥

ಮನೆಯ ಗಂಡ ಮಾಯವಾಗಲಿ
ಉಣ ಬಂದ ಮೈದುನ ಒರಗಲಿ, ನೆರೆ-
ಮನೆಯು ಹಾಳು ಹಾಳಾಗಲಿ, ನಾ-
ದಿನಿ ಅತ್ತಿಗೆಯರು ಸಾಯಲಿ ಹರಿಯೆ ॥ ೨ ॥

ಕಂದನ ಕಣ್ಣೊಂದು ಮುಚ್ಚಲಿ, ಆ-
ಚಂದ್ರಂಗೆ ಹಾವು ಕಚ್ಚಲಿ
ದ್ವಂದ್ವಾರ್ಥವನು ಬಿಚ್ಚಲಿ ಪು-
ರಂದರ ವಿಠ್ಠಲ ಮೆಚ್ಚಲಿ ಹರಿಯೆ ॥ ೩ ॥

**Note:** Below mentioned lyrics in green highlights are as per Ref. 2.

ರಾಗ: ನಾದನಾಮಕ್ರಿಯ ತಾಳ: ಛಾಪು

ಏನಾದರು ಒಂದಾಗಲಿ || ಪ ||
ನೂರೆಂಟು ದೇವರು ಮೊರ ತುಂಬ ಕಲ್ಲೆ || ಅಪ ||

ಮನೆಯ ಗಂಡ ಮಾಯವಾಗಲಿ
ಉಣ ಬಂದ ಮೈದುನ ಒರಗಲಿ
ಘನ ಅತ್ತಿಗೆ ನಾದಿನಿ ಸಾಯಲಿ ನೆರೆ
ಮನೆ ಹಾಳಾಗಿ ಹೋಗಲೊ ಹರಿಯೆ || 1 ||

ಅತ್ತೆಯ ಕಣ್ಣೆರಡು ಇಂಗಲಿ
ಮಾವನ ಕಾಲೆರಡು ಮುರಿಯಲಿ
ಹಿತ್ತಲ ಗೋಡೆಯು ಬೀಳಲಿ
ಕಾಡ ಕತ್ತಲೆಯಾದರು ಕವಿಯಲೊ ಹರಿಯೆ || 2 ||

ಕಂದನ ಕಣ್ಣೆರಡು ಮುಚ್ಚಲಿ
ಚಂದವಾದ ಹಾವು ಕಚ್ಚಲಿ
ದ್ವಂದಾರ್ಥಗಳೆಲ್ಲ ಬಿಚ್ಚಲಿ ಪು-
ರಂದರ ವಿಠಲನು ಮೆಚ್ಚಲೊ ಹರಿಯೆ || 3 ||

**Classification:** Mundige
**Ankita:** purandara vittala
**Location:** NA
**Category:** Samsara Chitragalu, Jeevanoddhara
**Sub-Category:** mane, deva, mara, kallu, atte, kannu, kattale, Krishna, mane, pati, mAya, marana, koosu, Chandra, uraga, oota,
**Pravachana:** NA
**Explanation:** NA